**ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಬೈಲಹೊಂಗಲ**

**ಸಿ.ಸಿ. ನಂ.1480/2022**

**ಚಾ.ಸಾ. - 7**
**ಪ್ರಾ.ಸಾ. - 5**

**ಸಾಕ್ಷಿದಾರರ ಹೆಸರು** ಃ ಶಿವಪ್ಪ ಬಸಪ್ಪ ಪಠಾತ

**ಸಾಕ್ಷಿದಾರರ ವಯಸ್ಸು** ಃ 50 ವರ್ಷ

**ಸಾಕ್ಷಿದಾರರ ಉದ್ಯೋಗ**ಃ ವ್ಯವಸಾಯ

**ಸಾಕ್ಷಿದಾರರ ವಿಳಾಸ** ಃ ಗುಡಿಕಟ್ಟಿ

**ಪ್ರಮಾಣ ವಚನ ಮಾಡಿದ ದಿನಾಂಕ ಃ 07-11-2023**

**ಮುಖ್ಯ ವಿಚಾರಣೆ ಃ ಎಪಿಪಿ ಅವರಿಂದ**

ಮೃತ ಮಹಂತೇಶ ನನ್ನ ಸಹೋದರ. ಸದರಿಯವರು ಈಗ 2 ವರ್ಷಗಳ ಹಿಂದೆ ರಸ್ತೆ ಅಪಘಾತದಲ್ಲಿ ಮೃತ ಪಟ್ಟಿರುತ್ತಾರೆ. ನಂತರ ವಿಷಯ ತಿಳಿದು ನಾನು ಬೆಳಗಾವಿ ಆಸ್ಪತ್ರೆಗೆ ಹೋಗಿರುತ್ತೇನೆ. ಅಲ್ಲಿಂದ ಅವರನ್ನು ಹುಬ್ಬಳ್ಳಿಯ ಕಿಮ್ಸ ಆಸ್ಪತ್ರೆಗೆ ದಾಖಲಿಸಿದ್ದು ನಂತರ ಚಿಕಿತ್ಸೆ ಫಲಕಾರಿಯಾಗದೇ ತೀರಿಕೊಂಡಿರುತ್ತಾರೆ. ಅಪಘಾತವು ಹೇಗೆ ಮತ್ತು ಯಾರ ತಪ್ಪಿನಿಂದ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಘಟನೆಯ ಕುರಿತು ಹೆಚ್ಚಿ ನ ಮಾಹಿತಿ ಇರುವುದಿಲ್ಲ. ಪೊಲೀಸರಿಗೆ ನಾನು ಯಾವುದೇ ಘಟನಾ ಸ್ಥಳ ತೋರಿಸಿರುವುದಿಲ್ಲ ಮತ್ತು ವಾಹನ ತಡೆ ಪಂಚನಾಮೆ ಕಾಲಕ್ಕೆ ಹಾಜರು ಇರುವುದಿಲ್ಲ. ಪೋಲೀಸರಿಗೆ ನಾನು ಯಾವುದೇ ಹೇಳಿಕೆ ಮತ್ತು ಮರುಹೇಳಿಕೆಯನ್ನು ನೀಡಿರುವುದಿಲ್ಲ.

**( ಈ ಹಂತದಲ್ಲಿ ಸಾಕ್ಷಿಯನ್ನು ಅಭಿಯೋಜಕರು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದರು ಅನುಮತಿ ನೀಡಲಾಯಿತು.)**

**ಪಾಟೀ ಸವಾಲು ಃ ಎಪಿಪಿ ಅವರಿಂದ**

ದಿಃ 8.3.2022 ರಂದು ಸಂಜೆ 5.00 ಗಂಟೆ ಸುಮಾರಿಗೆ ಆರೋಪಿಯು ಬೆಳವಡಿ - ಬೈಲಹೊಂಗಲ ರಸ್ತೆಯ ಮೇಲೆ ಖಂಡೋಜಿಯವರ ಹೊಲದ ಹತ್ತಿರ ಆರೋಪಿ ತನ್ನ ಮೊಟರಸೈಕಲ ನಂ ಕೆಎ 24 ಎಕ್ಸ 9158 ರ ಮೇಲೆ ಮೃತ ಮಹಂತೇಶ ಈತನನ್ನು ಕೂಡಿಸಿಕೊಂಡು ಅತೀ ಜೋರಾಗಿ ಮತ್ತು

ನಿರ್ಲಕ್ಷ್ಯತನದಿಂದ ಚಲಾಯಿಸಿಕೊಂಡು ಹೋಗಿ ರಸ್ತೆಯ ಪಕ್ಕದಲ್ಲಿ ಇರುವ ಗೂಟಕಲ್ಲಿಗೆ ಹಾಯಿಸಿ ಅಪಘಾತ ಪಡಿಸಿರುತ್ತಾನೆ ಎಂದು ನನಗೆ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಅಪಘಾತದಲ್ಲಿ ಮಹಂತೇಶ ಈತನಿಗೆ ತಲೆಗೆ ಕಿವಿಗೆ ಮತ್ತು ಇತರೆ ಭಾಗಗಳಿಗೆ ಭಾರಿ ಪೆಟ್ಟಾಗಿದ್ದು ಆಸ್ಪತ್ರೆಗೆ ದಾಖಲಿಸಿರುತ್ತೇವೆ ಎಂದು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ನಂತರ ಕಿಮ್ಸ ಆಸ್ಪತ್ರೆಯಲ್ಲಿ ಮಹಂತೇಶ ಈತನು ಮೃತ ಪಟ್ಟಿದ್ದು ದಿ:10.3.2022 ರಂದು ಪೊಲೀಸರಿಗೆ ಈಗ ಓದಿ ಹೇಳಿದಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ನಿರಾಕರಿಸಿದ ಹೇಳಿಕೆಯನ್ನು ನಿಪಿ-9 ಎಂದು ಗುರುತಿಸಲಾಯಿತು. ನಂತರ ಪೊಲೀಸರಿಗೆ ಅದೇ ದಿನ ಘಟನಾ ಸ್ಥಳ ತೋರಿಸಿದ್ದು ಪೊಲೀಸರು ನಿಪಿ-2 ರಂತೆ ಸದರಿ ಸ್ಥಳದ ಪಂಚನಾಮೆಯನ್ನು ಮಾಡಿ ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸಾಕ್ಷಿಯು ಸಹಿ ಪಡೆದಿರುತ್ತಾರೆ ಆದರೆ ಯಾವ ಕಾರಣಕ್ಕಾಗಿ ಎಂದು ನನಗೆ ಗೊತ್ತಿಲ್ಲ. ಸಾಕ್ಷಿಯು ನಿಪಿ-2 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು. ಆ ನಂತರ ಮರಳಿ ಠಾಣೆಗೆ ಬಂದು ನಿಪಿ-3 ರಂತೆ ವಾಹನ ತಡೆ ಪಂಚನಾಮೆಯನ್ನು ಮಾಡುವಾಗ ನಾನು ವಾಹನವನ್ನು ತೋರಿಸಿರುತ್ತೇನೆ ಎಂದರೆ ಸರಿಯಲ್ಲ. ಆದರೆ ದಾಖಲೆಯ ಮೇಲೆ ನನ್ನ ಸಹಿ ಪಡೆದಿರುತ್ತಾರೆ ಎಂದು ನುಡಿಯುತ್ತಾರೆ. ಸಾಕ್ಷಿಯು ನಿಪಿ-3 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-3(ಸಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-4 ರಿಂದ 7 ನ್ನು ನೋಡಿ ಗುರುತಿಸಿರುತ್ತಾರೆ. ನಂತರ ಪೊಲೀಸರಿಗೆ 10.3.2022 ರಂದು ಮಹಂತೇಶ ಈತನು ಮೃತ ಪಟ್ಟ ಬಗ್ಗೆ ಮರುಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ನಿರಾಕರಿಸಿದ ಮರುಹೇಳಿಕೆಯನ್ನು ನಿಪಿ-10 ಎಂದು ಗುರುತಿಸಲಾಯಿತು. ಆರೋಪಿಯು ಪರಿಚಯ ಇರುವ ಕಾರಣ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು ಆರೋಪಿ ಪರ ವಕೀಲರಿಂದ</u>

ಆರೋಪಿತರ ಪರ ವಕೀಲರು ಪಾಟೀ ಸವಾಲು ಏನೂ ಇಲ್ಲ ಎಂದು ಹೇಳುತ್ತಾರೆ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಹೆ ಪ್ರ ದ ನ್ಯಾ ದಂ ನ್ಯಾ ಬೈಲಹೊಂಗಲ